

**ಕಾವ್ಯಾ ಕಡಮೆ**
ಕಲೆ: ವಿಶ್ವನಾಥ್ ಎ.ಎಸ್.



# ಲವ್ ಪೊಯಮ್ಸ್

1
Don't state the obvious!
ಅಂತ ಶುರು ಮಾಡಿದವಳು ನಾನೇ.
ಮತ್ತೇನು ಮಾಡ್ಬೇಕಮ್ಮಾ?
ಸುತ್ತಿ ಬಳಸಿ ಹೇಳು ಅಂದಿದ್ದಕ್ಕೆ
ಕರ್ಮ ಅಂದಿದ್ದನವನು.
ಈಗೇನು?
ಅದಲು ಬದಲು ಆಗಿಹೋಗಿದೆ
STAND.

2
ಹಸೀ ಮೈ
ಅಂತಾರೆ
ಹೊಸ ವಧುವಿನದು.

ಹಸೀ ಮೈ, ಗರಂ ಆಗೂದು
ಎಂದು ಕಂಡಕಂಡವರೆಲ್ಲ
ದೊಡ್ಡ ಲೋಟದಲ್ಲಿ ಹಾಲು
ತಂದು ಕೊಡುತ್ತಾರೆ

ನೆತ್ತಿಗೆ ಎಣ್ಣೆ ತಟ್ಟುತ್ತಾರೆ.
ಹಾಗೆ ಆಗಿದೆ

ಹಸೀ ಮೈ–
ದೇಹದ್ದು ಬೇರೆ.
ಆತ್ಮ ಕೂಡ–
Bare.

3
ಸಿಕ್ಕಾಗ–
ಒಂದು
ಎರಡು
ಮೂರು...
...........
ಸ್ಟೆಪ್ಪು ಹತ್ತುತ್ತ ಹೋಗಿ–

ಕಡೆಗೆ ಹತ್ತು
ಅಲ್ಲ

Leap.
ಒಮ್ಮೆಲೇ ಹತ್ತು

ಹತ್ತು–
And we stay there.

4
Body is a Machine
–Descartes

ಅಂತೆ.
ದೇಹವೆಂಬ ಯಂತ್ರವ
ಇಂದ್ರಿಯಗಳು ಒಂದಾಗಿ
ಮುನ್ನಡೆಸುವವಂತೆ.

ಎಲ್ಲ ಅಂತೆ–ಕಂತೆ.
ಇಲ್ಲೇ ನೋಡಿ–
ಮಾತು ಹೇಳೋದೇ ಬೇರೆ.
ನೋಟ ದಾಟಿಸೋದೇ ಬೇರೆ.

